ರಾಜ್ಯದಲ್ಲಿ ವಿದ್ಯಾರ್ಥಿನಿಲಯಗಳು ಹಾಗೂ ಗಂಗಾ ಕಲ್ಯಾಣ ಯೋಜನೆ

618 (5184) : ಶ್ರೀ ಸಿಂಧ್ಯ ಪಿ.ಜಿ.ಆರ್. ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳ ಸಂಖ್ಯೆ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳನ್ನು ಹೆಚ್ಚು ಪ್ರಾರಂಭ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು: (ವಿವರಗಳನ್ನು ನೀಡುವುದು);

ಇ) ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಎಂದಿನಿಂದ ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗುವುದು (ವಿವರಗಳನ್ನು ನೀಡುವುದು)?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು)

ಅ) ಹೌದು.

ಆ) 2003–04ನೇ ಸಾಲಿನಲ್ಲಿ ಉತ್ತರ ಕರ್ನಾಟಕದ 7 ಹಿಂದುಳಿದ ಜಿಲ್ಲೆಗಳಾದ ಬಿಜಾಪುರ, ಬಾಗಲಕೋಟೆ, ಬೀದರ್, ರಾಯಚೂರು, ಗುಲ್ಬರ್ಗಾ, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮೆಟ್ರಿಕ್–ಪೂರ್ವ/ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗುತ್ತದೆ. ಸಂಖ್ಯೆಗಳನ್ನು ನಿರ್ಣಯ ಮಾಡಲಾಗುತ್ತಿದೆ.

ಇ) 2003–04ನೇ ಸಾಲಿಗೆ ಸರ್ಕಾರವು ಆಯವ್ಯಯದಲ್ಲಿ ಗಂಗಾಕಲ್ಯಾಣ ಯೋಜನೆಗೆ 445.00 ಲಕ್ಷಗಳನ್ನು ನಿಗದಿಪಡಿಸಿದೆ. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಸಾಮೂಹಿಕ ನೀರಾವರಿಯ 72 ಘಟಕಗಳ ಗುರಿಯನ್ನು ಮತ್ತು ವೈಯಕ್ತಿಕ ಕೊಳವೆ ಬಾವಿಗಳ 352 ಗುರಿಗಳನ್ನು ಒಳಗೊಂಡ ಒಟ್ಟಾರೆ 496 ಕೊಳವೆಬಾವಿಗಳನ್ನು 568 ಫಲಾನುಭವಿಗಳಿಗೆ ಒದಗಿಸಲಿದೆ.

ಈ) ಮೇಲಿನ ಉಪಪ್ರಶ್ನೆ (ಇ)ಗೆ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಧ್ಯಕ್ಷರೆ, ವಾಸ್ತವಾಂಶವನ್ನು ಮಾನ್ಯ ಮಂತ್ರಿಗಳು ಒಪ್ಪಿದ್ದಾರೆ. ಈ ಬಗ್ಗೆ ನನ್ನ ಉಪ ಪ್ರಶ್ನೆಗಳೇನೆಂದರೆ, ನನಗೆ ಗೊತ್ತಿರುವ ಹಾಗೆ ಕರ್ನಾಟಕದಲ್ಲಿ ಸುಮಾರು 72 ಲಕ್ಷ ಜನ ಅಲ್ಪಸಂಖ್ಯಾತರಿದ್ದಾರೆ. ಕರ್ನಾಟಕದ ಜನಸಂಖ್ಯೆಯಲ್ಲಿ ಅಲ್ಪಸಂಖ್ಯಾತರ ಶೇಕಡ 10–11ರಷ್ಟಿದ್ದಾರೆ ಎಂದು ತೆಗೆದುಕೊಂಡರೂ ಸುಮಾರು 60–70 ಲಕ್ಷ ಜನರಿದ್ದಾರೆ. ಈ 60–70 ಲಕ್ಷ ಜನಸಂಖ್ಯೆಯ ಒಟ್ಟು ಅಲ್ಪಸಂಖ್ಯಾತರಿಗೆ ಇರತಕ್ಕಂಥ ಹಾಸ್ಟೆಲ್‌ಗಳು 14. ಇತರೇ ಜನಾಂಗದವರಿಗೆ 2554 ಹಾಸ್ಟೆಲ್‌ಗಳಿವೆ. 2554ಕ್ಕೂ 14ಕ್ಕೂ ಎಲ್ಲಿಯ ಹೋಲಿಕೆ? ಈ ಪ್ರಶ್ನೆಗೆ ತಾವು ಉತ್ತರ ಕೊಡಬೇಕು. ಈಗಿರುವ ಹಾಸ್ಟೆಲ್‌ಗಳು ಸಾಲದು ಎಂದು ಸರ್ಕಾರ ಒಪ್ಪಿಕೊಂಡರೆ ಆಗುವುದಿಲ್ಲ. ಅದಕ್ಕೆ ಪರಿಹಾರವೇನು? ಪರಿಹಾರಕ್ಕಾಗಿ ನೀವು ಏನು ಹೇಳಿದ್ದೀರಿ ಎಂದರೆ, ಈ ವರ್ಷ ಹೈದರಾಬಾದ್–ಕರ್ನಾಟಕ ಏರಿಯಾ ಮತ್ತು ಮುಂಬೈ–ಕರ್ನಾಟಕ ಏರಿಯಾದ ಏಳು ಜಿಲ್ಲೆಗಳಿಗೆ ಡೆವಲಪ್‌ಮೆಂಟ್ ಪಾಯಿಂಟ್‌ನಿಂದ ಕೆಲವು ಹಾಸ್ಟೆಲ್‌ಗಳನ್ನು ಮಂಜೂರಾತಿ ಮಾಡುತ್ತಿದ್ದೇವೆ. ಅದರಲ್ಲೇ ಇದನ್ನೂ

ಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. No, that is not the answer which I expected from you. ನಾನು ಏನು ಒತ್ತಾಯ ಮಾಡುತ್ತೇನೆ ಎಂದರೆ, ಕನಿಷ್ಟ ಪಕ್ಷ ಒಂದು ಜಿಲ್ಲೆಗೆ ಎರಡು ಹಾಸ್ಟೆಲ್‌ಗಳಂತೆ, ಈ ವರ್ಷದಲ್ಲಿ 55 ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಬೇಕು. ಈ ಪ್ರಸ್ತಾವನೆ ನಾನು ಸೋಶಿಯಲ್ ವೆಲ್‌ಫೇರ್ ಮಿನಿಸ್ಟರ್ ಆಗಿದ್ದಾಗಲೇ ಇತ್ತು. ನಾನೇ ಎರಡು ಸಾರಿ ಮಂತ್ರಿಯಾದರೂ ಅದು ಅನೇಕ ಕಾರಣಗಳಿಂದ ಸಾಧ್ಯವಾಗಲಿಲ್ಲ. ಆದರೆ ಈಗ ತಾವು ಅಲ್ಪಸಂಖ್ಯಾತರಿಗಾಗಿಯೇ ಒಂದು ವಿಶೇಷವಾದ ಇಲಾಖೆಯನ್ನು ಮಾಡಿರುವುದರಿಂದಾಗಿ, 'ನಿಮ್ಮ ಹತ್ತಿರ ಇನ್‌ಫ್ರಾಸ್ಟ್ರಕ್ಚರ್ ಇರುವುದರಿಂದಾಗಿ, ಈ ವರ್ಷ ಪ್ರತ್ಯೇಕವಾಗಿ ಜಿಲ್ಲೆಗೆ ಎರಡು ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಲು ತೊಂದರೆಯೇನು? ಅವರ ಜನಸಂಖ್ಯೆಗೆ ಅನುಗುಣವಾಗಿ ಆಗುವುದೇ ಇಲ್ಲ. ಅವರ ಜನಸಂಖ್ಯೆಗೆ ಅನುಗುಣವಾಗಿ ಇತರೇ ಜನಾಂಗದವರಿಗೆ ಕೊಟ್ಟಿರತಕ್ಕಂಥ ಫೆಸಿಲಿಟಿಗಳನ್ನು ಕಂಪೇರ್ ಮಾಡಿದರೆ you should start minimum five hundred hostels to them. ಎಜ್ಯುಕೇಷನಲಿ ಅವರು ಎಷ್ಟೊಂದು ಬ್ಯಾಕ್‌ವರ್ಡ್ ಇದ್ದಾರೆ ಎನ್ನುವುದು ನಮಗೂ, ನಿಮಗೂ ಗೊತ್ತಿರುವ ವಿಚಾರ. ನಂತರ, ನಾನು ಗಂಗಾ ಕಲ್ಯಾಣದ ಬಗ್ಗೆ ಪ್ರಶ್ನೆ ಕೇಳಿದ್ದೇನೆ. 72 ಲಕ್ಷ ಜನಸಂಖ್ಯೆ ಇರತಕ್ಕಂಥವರಿಗೆ ನೀವು ಇಡೀ ವರ್ಷದಲ್ಲಿ ಕೊಡುತ್ತಿರುವಂಥಾದ್ದು, 72 ಘಟಕಗಳು. ಅಂದರೆ 72 ಬೋರೆವೆಲ್‌ಗಳು ಮಾತ್ರ. ಆದರೆ, ನಾವು ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುತ್ತೇವೆ, ಅವರನ್ನು ಉದ್ಧಾರ ಮಾಡುತ್ತೇವೆ ಎಂದು ನೀವು ಹೇಳುತ್ತೀರಿ. ಅವರ ಓಟು ತೆಗೆದುಕೊಳ್ಳಲು ನೀವು ಏನು ಬೇಕಾದರೂ ಹೇಳಿಕೊಳ್ಳಿ. I appreciate Mr. H.D. Deve Gowda on this occasion. He started four residential hostels for them. ಸ್ವಾತಂತ್ರ್ಯ ಬಂದ ಮೇಲೆ ಕರ್ನಾಟಕದಲ್ಲಿ ಆಗಿರುವ 52 ಹಾಸ್ಟೆಲ್‌ಗಳ ಪೈಕಿ ಅಲ್ಪಸಂಖ್ಯಾತರಿಗಾಗಿ ಆಗಿರುವುದು 7 ಹಾಸ್ಟೆಲ್‌ಗಳು. ಅವುಗಳಲ್ಲಿ ನಾಲ್ಕು ಹಾಸ್ಟೆಲ್‌ಗಳನ್ನು ದೇವೇಗೌಡರು ಪ್ರಾರಂಭ ಮಾಡಿದರು. Similarly under this borewell programme also, at least you can give 1000 borewells to them. ಇದರ ಅರ್ಥವೇನೆಂದು ದಯವಿಟ್ಟು ಹೇಳಿ. ಇವೆರಡೂ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ, ಸಚಿವ ಸಂಪುಟದಲ್ಲಿ ಪ್ರಸ್ತಾವವನ್ನು ಇಡಿ. ನೀವು ಸುಲಭದಲ್ಲಿ ಉತ್ತರ ಕೊಡಬಹುದು, ನೀವು ಮಂತ್ರಿಗಳು ಆಗಿರಲಿಲ್ಲವೇ? ನಿಮ್ಮ ಸರ್ಕಾರದಲ್ಲಿ ಮಾಡಿದ್ದು ಏನು ಎಂದು ನೀವು ಹೇಳಬಹುದು.

6.10 ಪಿಎಂ

ನಾನು ಆ ಉತ್ತರದಿಂದ ವಾಪಸ್ಸು ಹೋಗಬಹುದು. ಆದರೆ ಈ ವರ್ಗದ ಜನಾಂಗದವರಿಗೆ ಏನಾದರೂ ನೀವು ಸಹಾಯ ಮಾಡಬೇಕೆಂದಿದ್ದರೆ ಅದು ನಿಮ್ಮ ಕಾಲದಲ್ಲಿ ಆಗಬೇಕು. ಆದ್ದರಿಂದ ನಾನು ಒತ್ತಾಯ ಮಾಡುವುದೇನೆಂದರೆ, ಇದನ್ನು ನೀವು ಸಚಿವಸಂಪುಟದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಬಹುಶಃ ಇದು ಅನೇಕರ ಗಮನಕ್ಕೆ ಬಂದ ಹಾಗಿಲ್ಲ. 2500 ಬಿ.ಸಿ.ಎಂ., ಎಸ್.ಸಿ:ಎಸ್.ಟಿ. ಹಾಸ್ಟೆಲುಗಳ ಪೈಕಿ ಅಲ್ಪಸಂಖ್ಯಾತರಿಗೆ ಇರುವುದು ಕೇವಲ 12 ಹಾಸ್ಟೆಲುಗಳು ಎಂದು ಬಹುತೇಕ ಜನರಿಗೆ ಗೊತ್ತಿಲ್ಲ. ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಯಾವುದೋ ಅಂಕಿಅಂಶಗಳನ್ನು ಓದುವಾಗ ನೋಡಿರತಕ್ಕಂಥ ವಿಚಾರ ಇದಾಗಿದೆ. ಅದರಿಂದಾಗಿಯೇ ಈ ಪ್ರಶ್ನೆಯನ್ನು ನಾನು ಕೇಳಿರತಕ್ಕಂಥದ್ದು. ದಯಮಾಡಿ ಗಂಗಾ ಕಲ್ಯಾಣದ ಬೆನಿಫಿಷರೀಸ್ ಮತ್ತು

ಹಾಸ್ಟೆಲುಗಳು ಇವೆರಡನ್ನೂ ಹೆಚ್ಚಿಗೆ ಮಾಡಲಿಕ್ಕೆ ತಾವು ಕ್ರಮ ತೆಗೆದುಕೊಳ್ಳುವುದಕ್ಕೆ ತೊಂದರೆ ಏನು ಎನ್ನುವುದನ್ನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಹಸನ್‌ಸಾಭ್ ನಭಿಸಾಬ್ ಧೋತಿಹಾಳ : ಈಗ ಮೈನಾರಿಟೀಸ್ ಹಾಸ್ಟೆಲ್ ವಿಚಾರದಲ್ಲಿ ಈಗಾಗಲೇ ಸರ್ಕಾರದ ಮುಂದೆ ಎಷ್ಟು ಪ್ರಸ್ತಾವನೆಗಳು ಬಂದಿವೆ ಎನುವುದನ್ನು ಮಾನ್ಯ ಮಂತ್ರಿಗಳು ತಿಳಿಸಿದರೆ ಬಹಳ ಒಳ್ಳೆಯದು.

ಶ್ರೀ ಎಂ.ಎಲ್. ಉಸ್ತಾದ್ : ಮಾನ್ಯ ಉಪಾಧ್ಯಕ್ಷರೆ, ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಇಡೀ ಸ್ಟೇಟ್‌ನಲ್ಲಿ ಅಲ್ಪಸಂಖ್ಯಾತರಿಗೆ 12 ಹಾಸ್ಟೆಲುಗಳು ಇವೆ. ಮೊದಲು ಇದು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಇತ್ತು. ಮೊಟ್ಟಮೊದಲನೆ ಬಾರಿಗೆ ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಿಂದ ತೆಗೆದು ಮೊದಲನೇ ಸಲ ಮೈನಾರಿಟಿ ಡಿಪಾರ್ಟ್‌ಮೆಂಟ್ ಕ್ರಿಯೇಟ್ ಮಾಡಿ ಅದಕ್ಕೆ ಸಚಿವ ಸ್ಥಾನ ಕೊಟ್ಟಿದ್ದು, ಇದು ಹೊಸದಾಗಿ ಸ್ಟಾರ್ಟ್ ಆಗಿರುವ ಡಿಪಾರ್ಟ್‌ಮೆಂಟ್ ಆಗಿರುತ್ತದೆ. ಮೊದಲು ಅಲ್ಪಸಂಖ್ಯಾತರ ಇಲಾಖೆ ವತಿಯಿಂದ 7 ಮೆಟ್ರಿಕ್‌ಪೂರ್ವ ಹಾಸ್ಟೆಲ್‌ಗಳು ದಕ್ಷಿಣ ಕನ್ನಡ, ದಾವಣಗೆರೆ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಪ್ರಸ್ತುತ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ 35 ಲಕ್ಷ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಹಾಗೂ 50 ಸಂಖ್ಯಾಬಲದ 5 ಮೆಟ್ರಿಕ್‌ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳು ಬೆಂಗಳೂರು ನಗರ, ಮೈಸೂರು, ದಕ್ಷಿಣ ಕನ್ನಡ, ಮಂಗಳೂರು, ಬೀದರ್, ಬಿಜಾಪುರಗಳಲ್ಲಿ ಈಗ ಸ್ಟಾರ್ಟ್ ಆಗಿ ಕಾರ್ಯನಿರ್ವಹಿಸುತ್ತಿವೆ. ರಾಜ್ಯದ ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. 2003–04ನೇ ಸಾಲಿನ ಉತ್ತರ ಕರ್ನಾಟಕದಲ್ಲಿ ಅವರು ಹೇಳಿದ ಹಾಗೆ 7 ಹಿಂದುಳಿದ ಜಿಲ್ಲೆಗಳಾದ ಬಿಜಾಪುರ, ಬೀದರ್, ಗುಲ್ಬರ್ಗಾ, ಕೊಪ್ಪಳ, ರಾಯಚೂರು, ಬಳ್ಳಾರಿ ಇಲ್ಲಿಗೆ ಕಳೆದ 55 ವರ್ಷದಲ್ಲಿ ಯಾವುದೇ ಪಕ್ಷದ ಸರ್ಕಾರ ಇರಲಿ, ಮೊದಲು 12 ಕೊಟ್ಟಿದ್ದರು, ಈ ಸಲ ಮೆಟ್ರಿಕ್‌ಪೂರ್ವ, ಮೆಟ್ರಿಕ್ ನಂತರದ ಎರಡೆರಡು ಹಾಸ್ಟೆಲ್‌ಗಳು ಅಂದರೆ ಟೋಟಲಿ 14 ಹಾಸ್ಟೆಲ್‌ಗಳನ್ನು ಕೊಡಬೇಕೆಂದು ಮೊದಲನೇ ಸಲ ನಾವು ಡಿಸಿಶನ್ ತೆಗೆದುಕೊಂಡಿದ್ದೇವೆ. ತಮ್ಮ ಪ್ರಕಾರ ಎಲ್ಲಾ ಜಿಲ್ಲೆಯಲ್ಲಿ ಈ ಎಲ್ಲಾ ಹಾಸ್ಟೆಲ್ಸ್ ಇರಬೇಕೆಂದು ಹೇಳಿದ್ದೀರಿ. ಆ ದಿಶೆಯಲ್ಲಿ ನಾನೂ ಸಹ ಇರಬೇಕೆಂದು ಬಯಸುತ್ತೇನೆ. ಅಲ್ಪಸಂಖ್ಯಾತರಲ್ಲಿ ಬಡವರೇ ಹೆಚ್ಚು ಇರುವಂಥದ್ದು. ಇದಲ್ಲದೆ ಈ ಹಳ್ಳಿಯಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಇಲಾಖೆ ವತಿಯಿಂದ ಏನು ಹಾಸ್ಟಲ್ಸ್ ನಡೆಯುತ್ತವೆ ಅಲ್ಲಿ 9 ಪರ್ಸಂಟ್ ಎಕ್ಸ್‌ಕ್ಲೂಸೀವ್ ಫಾರ್ ಮುಸ್ಲಿಂ ಬ್ಯಾಕ್‌ವಾರ್ಡ್ ಹಾಸ್ಟೆಲ್ಸ್‌ನಲ್ಲಿ ಸಹ ರಿಸರ್ವೇಷನ್ ಇದೆ. ಬಹಳಷ್ಟು ಜನರಿಗೆ ಅದು ಗೊತ್ತಿಲ್ಲ. ಅದನ್ನು ಕೂಡ ತೆಗೆದುಕೊಳ್ಳಬಹುದು. ಇನ್ನು ಗಂಗಾಕಲ್ಯಾಣ ಯೋಜನೆ ವಿಚಾರವಾಗಿ ಹೇಳುವುದಾದರೆ ಇದು ಸಾಲುವುದಿಲ್ಲ ಎಂದು ನಾನೂ ಕೂಡ ಒಪ್ಪುತೇನೆ. ಪ್ರತಿಯೊಂದು ಕ್ಷೇತ್ರದಲ್ಲಿ ಎಂ.ಎಲ್.ಎ ಯಾರು ಇರುತ್ತಾರೆ ಅವರೇ ಇದರ ಚೇರ್‌ಮನ್ ಆಗಿರುತ್ತಾರೆ. ಎಸ್.ಸಿ:ಎಸ್.ಟಿ. ಗತಿಯೂ ಅದೇ ಇದೆ, ಮೈನಾರಿಟಿ ಗತಿಯೂ ಅದೇ ಇದೆ. ಒಂದು ಅಥವಾ ಎರಡು ಕೊಳವೆ ಬಾವಿಯನ್ನು ನಾವು ಕೊರೆಸಿ ಕೊಡಬೇಕಾಗುತ್ತದೆ. ಆ ದಿಶೆಯಲ್ಲಿ ನಾನೂ ಸಹ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಅದಕ್ಕೆ ಆದಷ್ಟು ಹೆಚ್ಚು ಹಣ ಕೊಡಬೇಕು

ಎಂದೂ ನಾನೂ ಕೇಳಿಕೊಳ್ಳುತ್ತೇನೆ. ತಮ್ಮ ಸಲಹೆ ಸೂಚನೆ ಏನಿದೆ ಅದನ್ನು ಗಮನದಲ್ಲಿಟ್ಟುಕೊಂಡು ಆ ದಿಶೆಯಲ್ಲಿ ಕೆಲಸ ಮಾಡುತ್ತೇನೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಉಪಾಧ್ಯಕ್ಷರೆ, ಬೋರ್‌ವೆಲ್ ಅಥವಾ ಯಾವುದೇ ಇರಬಹುದು. ಬೇರೆಯವರಿಗೆ ಮತ್ತು ಅಲ್ಪಸಂಖ್ಯಾತರಿಗೆ ಕಂಪೇರ್ ಮಾಡಿ ನೋಡಿದಾಗ ಕೇವಲ 12 ಮಾತ್ರ ಅಲ್ಪಸಂಖ್ಯಾತರಿಗೆ ಕೊಟ್ಟಿದ್ದಾರೆ. ಹಾಸ್ಟಲ್‌ಗಳ ಸಂಖ್ಯೆ ನೋಡಿದಾಗ ಇಡೀ ರಾಜ್ಯಕ್ಕೆ ಕೇವಲ ಒಂದೇ ಒಂದು ಕೊಟ್ಟಿದ್ದಾರೆ. ಯಾವುದೇ ಸರ್ಕಾರ ಆಗಿರಬಹುದು. ಸ್ವಾತಂತ್ರ್ಯ ಬಂದು 55 ವರ್ಷ ಆದರೂ ಕೂಡ ಮೈನಾರಿಟಿ ಜನಾಂಗದವರಿಗೆ ಈ ಮಟ್ಟದಲ್ಲಿ ಸೌಲಭ್ಯವನ್ನು ಕೊಟ್ಟರೆ ಅವರು ಎಷ್ಟರಮಟ್ಟಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಹೇಗೆ ಮುಂದು ಬರುತ್ತಾರೆ ಎಂದು ತಮ್ಮ ಮುಖಾಂತರ ಅವರನ್ನು ಕೇಳಬಯಸುತ್ತೇನೆ. ಆದಕಾರಣ, ಇವರಿಗೆ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ಅಲ್ಪಸಂಖಾಂತರ ಹಾಸ್ಟಲ್ ಅನ್ನು ತೆರೆಯುವುದಕ್ಕೆ ಸರ್ಕಾರಕ್ಕೆ ಹಣದ ಕೊರತೆ ಇದೆಯೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಈಗ ತಾತ್ಕಾಲಿಕ ಪರಿಹಾರ ಏನೆಂದರೆ, ಬಿ.ಸಿ.ಎಂ. ಹಾಸ್ಟೆಲ್ಸ್ ಮುಂತಾದ ಬೇರೆ ಬೇರೆ ಹಾಸ್ಟೆಲ್‌ಗಳು ಇದ್ದಾಗ ಇಷ್ಟು ಪರ್ಸೆಂಟ್ ಸೀಟ್ ಅನ್ನು ಅಲ್ಪಸಂಖ್ಯಾತರಿಗೆ ಕೊಡಬೇಕೆನ್ನುವ ನಿರ್ಣಯವನ್ನು ಸಚಿವಸಂಪುಟದಲ್ಲಿ ಮಾಡಿದರೆ ತಾತ್ಕಾಲಿಕ ಪರಿಹಾರವಾಗುತ್ತದೆ. ಏಕೆಂದರೆ ಬಿ.ಸಿ.ಎಂ. ಹಾಸ್ಟೆಲ್‌ಗಳಲ್ಲಿ ಸಹ ಎಲ್ಲಾ ವಿದ್ಯಾರ್ಥಿಗಳು ಇರುತ್ತಾರೆ. ಈ ಅಲ್ಪಸಂಖ್ಯಾತರ ಹಾಸ್ಟೆಲ್ ಅನ್ನು ಪ್ರತ್ಯೇಕವಾಗಿ ಮಾಡುವ ಬದಲು ಬಿ.ಸಿ.ಎಂ. ಹಾಸ್ಟೆಲ್‌ಗಳಲ್ಲಿ 50 ಸೀಟ್ ಇದ್ದರೆ ಅದರಲ್ಲಿ ಐದು ಅಥವಾ ಹತ್ತು ಸೀಟನ್ನು ಇವರಿಗೆ ಕೊಟ್ಟಾಗ ಇವರು ಸಹ ಅಲ್ಲಿ ಓದಲಿಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಅದನ್ನು ಏಕೆ ತಾತ್ಕಾಲಿಕವಾಗಿ ಮಾಡಬಾರದು? ಅದನ್ನು ಮಾಡಲಿಕ್ಕೆ ಸಚಿವಸಂಪುಟದಲ್ಲಿ ಅಥವಾ ಇಲ್ಲಿ ಯುನಾನಿಮಸ್ ಆಗಿ ನಿರ್ಣಯ ತೆಗೆದುಕೊಂಡರೆ ಸೂಕ್ತ ಪರಿಹಾರವಾಗುತ್ತದೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಉಪಾಧ್ಯಕ್ಷರೆ, 15 ಎಕರೆ 20 ಎಕರೆ ಜಮೀನುಗಳನ್ನು ಒಂದುಗೂಡಿಸಿ ಒಂದೊಂದು ಗಂಗಾಕಲ್ಯಾಣ ಯೋಜನೆಗಳನ್ನು ಇಲ್ಲಿಯವರೆಗೆ ನಾವು ಮಾಡಿದ್ದೆವು. ಐದೈದು ಗಂಗಾಕಲ್ಯಾಣ ಯೋಜನೆಗಳನ್ನು ಮಾಡಬೇಕೆಂದು ಜನರ ಬೇಡಿಕೆ ಇದೆ. ಸಚಿವರ ಜೊತೆ ಬೇಕಾದರೆ ನಾವೆಲ್ಲರೂ ಮುಖ್ಯಮಂತ್ರಿಗಳ ಹತ್ತಿರ ಬರುತ್ತೇವೆ. ಆ ಕಾರ್ಪೊರೇಷನ್‌ಗೆ ಹೆಚ್ಚಿನ ಹಣ ಒದಗಿಸಿ ಗಂಗಾಕಲ್ಯಾಣ ಯೋಜನೆಗಳನ್ನು ಹೆಚ್ಚಿಗೆ ಮಾಡಿಕೊಡುವಂಥ ವ್ಯವಸ್ಥೆ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಎಲ್. ಉಸ್ತಾದ್ : ಮಾನ್ಯ ಉಪಾಧ್ಯಕ್ಷರೆ, ಕೆಲವು ಹಾಸ್ಟೆಲ್‌ಗಳಲ್ಲಿ ಮತೀಯ ಅಲ್ಪಸಂಖ್ಯಾತರಿಗೆ ಇಷ್ಟು ಪರ್ಸೆಂಟ್ ಪ್ರವೇಶಾವಕಾಶ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ ಹಾಗೆ ಅದರ ಬಗ್ಗೆ ಮೊದಲಿನಿಂದಲೂ ಆರ್ಡರ್ ಇದೆ. ಇದು ಬಹಳಷ್ಟು ಜನರಿಗೆ ಗೊತ್ತಿಲ್ಲ. ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟೆಲ್ಸ್ ಎಲ್ಲೆಲ್ಲಿ ಇವೆ 9 ಪರ್ಸೆಂಟ್ ಕಡ್ಡಾಯವಾಗಿ ಎಕ್ಸ್‌ಕ್ಲೋಸ್‌ವಿಲಿ ಫಾರ್

ಮುಸ್ಲಿಂಗೆ ಕೊಡಬೇಕೆಂದು ಮೊನ್ನೆ ನಾನು ಡಿಕ್ಲೇರ್ ಮಾಡಿದೆ. ನಾನು ಮೊನ್ನೆ ಪೇಪರ್ ಮುಖಾಂತರ ಡಿಕ್ಲೇರ್ ಮಾಡಿದಾಗ ಮತ್ತು ಎಲ್ಲಿ ನಾನು ಹೋಗುತ್ತೇನೆ ಅಲ್ಲಿ ಭಾಷಣ ಮಾಡುವ ಸಂದರ್ಭದಲ್ಲಿ ಸಹ ಇದನ್ನು ಹೇಳುತ್ತಿದ್ದೇನೆ. 9 ಪರ್ಸಂಟ್ ಸೀಟ್ ಅನ್ನು ಎಕ್ಸ್‌ಕ್ಲೂಸಿವಿಲಿ ಫಾರ ಮುಸ್ಲಿಮ್ಸ್‌ಗೆ ಕೊಡುವುದು ಗೊತ್ತಿರಲಿಲ್ಲ. ಈಗ ಎಲ್ಲರಿಗೂ ಗೊತ್ತಾಗಿದೆ. ಇದು ಪ್ರತ್ಯೇಕವಾದ ಇಲಾಖೆ ಆದ ನಂತರ ನಾನು ಆದಷ್ಟು ಮಟ್ಟಿಗೆ ಈ ಎಜುಕೇಷನ್ ಸಲುವಾಗಿ ಏಕೆಂದರೆ educationally they are very backward ನಾನು ಸರ್ವೇ ರಿಪೋರ್ಟ್ ನೋಡಿದ್ದೇನೆ. ಇಡೀ ಹಿಂದೂಸ್ಥಾನದಲ್ಲಿ ಸರ್ವೆ ಮಾಡಿ ನೋಡಿದಾಗ ಕೇವಲ 11 ಪರ್ಸಂಟ್ ಮುಸ್ಲಿಮ್ಸ್ ಮಾತ್ರ ನಾವು ಎಜುಕೇಟೆಡ್ ಇದ್ದೇವೆ. ಹಾಗೆಯೇ ನಮ್ಮ ಉತ್ತರ ಕರ್ನಾಟದಲ್ಲಿ ಹಿಂದುಳಿದಿರುವಂಥ 7 ಜಿಲ್ಲೆಗಳು ಏನಿವೆ ಇಲ್ಲಿ ಮಕ್ಕಳು ಪಿ.ಯು.ಸಿ.ಗೆ ಬರುವ ವೇಳೆಗೆ 90 ಪರ್ಸೆಂಟ್ ಮಕ್ಕಳು ಡ್ರಾಪ್ ಔಟ್ ಆಗುತ್ತಾರೆ. ಆದ್ದರಿಂದ ಡ್ರಾಪ್ ಔಟ್ ಆಗುವುದು ತಡೆಯಲಿ ಎನ್ನುವ ಉದ್ದೇಶದಿಂದ ಈ ವರ್ಷ 16 ಹಾಸ್ಟಲ್‌ಗಳನ್ನು ಸ್ಯಾಂಕ್ಷನ್ ಮಾಡುವುದಕ್ಕೆ ಹೊರಟಿದ್ದೇವೆ. ಇನ್ನು ಗಂಗಾಕಲ್ಯಾಣ ಯೋಜನೆ ಸಲುವಾಗಿ ಸಾಕಷ್ಟು ಕೆಲಸ ಬೆಳಗಾಂ ಜಿಲ್ಲೆಯಲ್ಲಿ ರೆಡಿಯಾಗಿದೆ. ಗಂಗಾಕಲ್ಯಾಣ ಯೋಜನೆಯ ಉಪಯೋಗವನ್ನು ಇಡೀ ರಾಜ್ಯದಲ್ಲಿ ಯರು ಪಡೆದುಕೊಂಡಿದ್ದಾರೆಂದರೆ ಶ್ರೀ ಪ್ರಕಾಶ್‌ರವರ ಊರಾದ ಬೆಳಗಾಂನ ಚಿಕ್ಕೋಡಿ ತಾಲ್ಲೂಕಿನಲ್ಲಿ, ಆ ದಿಶೆಯಲ್ಲಿ ನಾನು ಸಹ ನಿಮ್ಮ ಜೊತೆಯಲ್ಲಿ ಸಹಮತ ವ್ಯಕ್ತಪಡಿಸುತ್ತೇನೆ. ಈ ಗಂಗಾಕಲ್ಯಾಣ ಯೋಜನೆ ಬಹಳ ಸಕ್ಸಸ್‌ಫುಲ್ ಆಗಿ ನಡೆದಿರುವುದರಿಂದ ನಾವೆಲ್ಲರೂ ಕೂಡಿ, ಎರಡನೆಯದು ಏನೆಂದರೆ ಕೊಳವೆಬಾವಿಗೆ ನಾವು ಬರೀ 65 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ, ಈ ಹಣ ನಮಗಾಗಲೀ, ಎಸ್‌ಸಿ:ಎಸ್‌ಟಿ ಮಂದಿಗಾಗಲೀ ಸಾಕಾಗುವುದಿಲ್ಲ. ಅದರ ಬಗ್ಗೆ ಸಬ್ಜೆಕ್ಟ್ ಕಮಿಟಿ ಮೀಟಿಂಗ್‌ನಲ್ಲಿ ಸಹ ಡಿಸ್‌ಕಶನ್ ಆಗಿದೆ. ಕನಿಷ್ಟ ಪಕ್ಷ ಒಂದು ಲಕ್ಷ ರೂಪಾಯಿ ಕೊಟ್ಟರೆ ಮಾತ್ರ ನಾವು ಅವರಿಗೆ ನೀರು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಸಾಮೂಹಿಕ ಕೊಳವೆ ಬಾವಿ ಏನಿದೆ ಐದೈದು ಗಂಗಾಕಲ್ಯಾಣ ಯೋಜನೆ ಆ ದಿಶೆಯಲ್ಲಿ ನಾವು ನೀವು ಎಲ್ಲರೂ ಕೂಡಿ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಅದನ್ನು ಸರಿಪಡಿಸುವಂಥ ಕೆಲಸವನ್ನು ಮಾಡೋಣ ಎಂದು ಹೇಳಲಿಕ್ಕೆ ಬಯಸುತ್ತೇನೆ.

ರಾಜ್ಯದಲ್ಲಿ ಹಾಸ್ಟೆಲ್‌ಗಳ ಪ್ರವೇಶ ಸಂಖ್ಯೆ ಹೆಚ್ಚಳ

619 (5354) : ಶ್ರೀ ಎಂ.ಡಿ ಲಕ್ಷ್ಮೀನಾರಾಯಣ (ತುರುವೇಕೆರೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸ್ಟೆಲ್‌ಗಳ ಪ್ರವೇಶಕ್ಕೆ ನಿಗಧಿ ಮಾಡಿರುವ ಸಂಖ್ಯೆಗಿಂತ ಹೆಚ್ಚು ಬೇಡಿಕೆ ಬರುತ್ತಿರುವುದು ಸರ್ಕರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅವಶ್ಯಕತೆಗೆ ತಕ್ಕಂತೆ ಸಂಖ್ಯೆ ಹೆಚ್ಚು ಮಾಡಲು ಇರುವ ತೊಂದರೆ ಏನು?

ಇ) ಬಡ ಮಕ್ಕಳ ಹಿತದೃಷ್ಟಿಯಿಂದ ಸರ್ಕಾರ ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದೇ?

ಈ) ಯಾವಾಗ ಅನುಮತಿ ನೀಡಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಹೌದು